# 'ಕನಕ'ನ ಲೋಕಜ್ಞಾನ

ನಿರ್ದೇಶಕ ಆರ್. ಚಂದ್ರು ಹೊಸ ಯೋಚನೆಗಳಿಗೆ, ಪ್ರಚಾರತಂತ್ರಗಳಿಗೆ ಹೆಸರಾದವರು. ಈ ತಂತ್ರಗಾರಿಕೆಯ ಹೊಸ ಕವಲು – 'ಕನಕ'. ಕಳೆದ ವಾರ ಈ ಚಿತ್ರದ ಹಾಡುಗಳ ಧ್ವನಿಮುದ್ರಣ ಆರಂಭಗೊಂಡಿದೆ. ಸುದ್ದಿ ಇರುವುದು ಚಿತ್ರಕ್ಕೆ ಚಾಲನೆ ದೊರೆತದ್ದರಲ್ಲಿ ಅಲ್ಲ; ಸಿನಿಮಾದ ನಾಯಕ ದುನಿಯಾ ವಿಜಯ್ ಎನ್ನುವುದರಲ್ಲಿ.

'ಮಾಸ್ತಿಗುಡಿ' ಚಿತ್ರದ ಶೂಟಿಂಗ್ ಸಂದರ್ಭದಲ್ಲಿ ಇಬ್ಬರು ಸಾಹಸ ಕಲಾವಿದರು ದುರ್ಮರಣಕ್ಕೀಡಾಗಿದ್ದರು. ಆ ದುರಂತದ ಘಟನೆ ತಾರ್ಕಿಕ ಕೊನೆ ಕಾಣುವವರೆಗೂ ಸಿನಿಮಾ ಚಟುವಟಿಕೆಗಳಿಂದ ದೂರ ಇರುವಂತೆ ವಿಜಯ್ ಅವರಿಗೆ ಚಲನಚಿತ್ರ ವಾಣಿಜ್ಯ ಮಂಡಳಿ ಸೂಚಿಸಿತ್ತು. 'ಮಾಸ್ತಿಗುಡಿ' ಹಾಗೂ ವಿಜಯ್ ನಾಳೆಗಳು ಸ್ಪಷ್ಟಗೊಳ್ಳುವ ಮುನ್ನವೇ ಚಂದ್ರು 'ಕನಕ' ಚಿತ್ರದ ಪ್ರಕಟಣೆ ಹೊರಡಿಸಿದ್ದಾರೆ. 'ಮಾಸ್ತಿಗುಡಿ' ಪ್ರಕರಣ ಬಗೆಹರಿದ ನಂತರವೇ ಚಿತ್ರೀಕರಣ ಪ್ರಾರಂಭಿಸುವೆ ಎನ್ನುವ ಜಾಣತನದ ಮಾತನ್ನೂ ಆಡಿದ್ದಾರೆ.

ನಾಯಕನ ಆಯ್ಕೆ ಮಾತ್ರವಲ್ಲ; ಪೋಷಕ ಪಾತ್ರಗಳ ವಿಷಯದಲ್ಲೂ ಚಂದ್ರು 'ಜಾಣತನ' ತೋರಿಸಿದ್ದಾರೆ. 'ಮಾಸ್ತಿಗುಡಿ' ದುರಂತದಲ್ಲಿ ಸಾವಿಗೀಡಾದ ಅನಿಲ್ ಹಾಗೂ ಉದಯ್ ಅವರ ಹೆಸರಿನ ಪಾತ್ರಗಳು ಚಿತ್ರದಲ್ಲಿ ಇರಲಿವೆಯಂತೆ. ಹಾಗಾದರೆ, ಚಿತ್ರದ ಕಥೆ ಏನು? ಅದಕ್ಕೆ ಚಂದ್ರು ಬೇರೆಯದೇ ಕಥೆ ಹೇಳುತ್ತಾರೆ. 'ಕನಕ' ಒಬ್ಬ ಆಟೊ ಡ್ರೈವರ್; ಆತ ರಾಜಕುಮಾರ್ ಅಭಿಮಾನಿ – ಇದು ಚಂದ್ರು ಕಥೆಯ ಮುಖ್ಯಾಂಶಗಳು.





## ಜಾಣ ಪೆದ್ದನ ಪ್ರೇಮಗಾಥೆ

ಕನ್ನಡ ಚಿತ್ರರಂಗದ ಪಾಲಿಗೆ ಈ ಬಾರಿಯ ಕ್ರಿಸ್‌ಮಸ್ ರಂಗುರಂಗಾಗಿ ಇರಲಿದೆ. ಈ ರಂಗಿನ ಕೇಂದ್ರದಲ್ಲಿ ಇರುವುದು – 'ಸುಂದರಾಂಗ ಜಾಣ'. ಸುಂದರಾಂಗನಾಗಿ ಗಣೇಶ್ ಅಭಿನಯಿಸಿರುವುದು ಹಾಗೂ ಆ ಸುಂದರನನ್ನು ನಿರ್ದೇಶಿಸಿರುವ ಜಾಣ ರಮೇಶ್ ಅರವಿಂದ್ ಎನ್ನುವುದು ಚಿತ್ರದ ವಿಶೇಷ. ರಾಕ್‌ಲೈನ್ ವೆಂಕಟೇಶ್ ನಿರ್ಮಾಣ ಎನ್ನುವುದು ಕೂಡ ಚಿತ್ರದ ಮತ್ತೊಂದು ವಿಶೇಷ.

ಕಮಲಹಾಸನ್‌ರ 'ಉತ್ತಮ ವಿಲ್ಲನ್' ಚಿತ್ರದ ಮೂಲಕ ಭಾರತೀಯ ಚಿತ್ರರಂಗದ ಗಮನ ಸೆಳೆದಿದ್ದ ರಮೇಶ್, ಇದೀಗ 'ಸುಂದರಾಂಗ ಜಾಣ'ನ ಮೂಲಕ ಕನ್ನಡ ಚಿತ್ರರಸಿಕರ ಎದುರು ಬರುತ್ತಿದ್ದಾರೆ (ಡಿ. 23 ಬಿಡುಗಡೆ). ಇದು ಒಬ್ಬ ಜಾಣ ಪೆದ್ದನ ಕಥೆ ಒಳಗೊಂಡಿರುವ ಸಿನಿಮಾ. ಪಠ್ಯ–ಪರೀಕ್ಷೆಗಳಲ್ಲಿ ಜಾಣರಾಗಿರುವ ಅನೇಕರು ಬದುಕಿನ ಲೋಕಜ್ಞಾನದಲ್ಲಿ ಹುಂಬರಾಗಿರುತ್ತಾರೆ. ಹೀಗೆ ಬುದ್ಧಿವಂತಿಕೆಯಲ್ಲಿ ಹಿಂದುಳಿದ, ಪ್ರೀತಿಯ ವಿಚಾರಕ್ಕೆ ಬಂದರೆ ನಂ. 1 ಎನ್ನುವ ತರುಣನ ಕಥೆಯನ್ನು ರಮೇಶ್ ನಿರೂಪಿಸಿದ್ದಾರೆ.

ಅಂದ ಹಾಗೆ, ಈ ಜಾಣನ ಕಥೆಯ ಮೂಲ ತೆಲುಗಿನಲ್ಲಿದೆ. 'ಭಲೇ ಭಲೇ ಮಗಾಡಿವೋಯ್' ಚಿತ್ರದ ರಿಮೇಕ್ ಕನ್ನಡದ ಈ ಜಾಣ. ಕಥೆಯ ಎಳೆಯಷ್ಟೇ ಉಳಿಸಿಕೊಂಡು, ಜಾಣನನ್ನು ರಮೇಶ್ ಹೊಸತಾಗಿ ರೂಪಿಸಿದ್ದಾರಂತೆ. ರಮೇಶ್ ನಿರ್ದೇಶನದ ಚಿತ್ರಗಳ ಟ್ರೇಡ್‌ಮಾರ್ಕ್ ಆದ ನವಿರುನಗೆ ಈ ಚಿತ್ರದಲ್ಲೂ ಇದೆಯಂತೆ.

ಜಾಣನಿಗೆ ಜೋಡಿಯಾಗಿ ಶಾನ್ವಿ ನಟಿಸಿದ್ದಾರೆ. 'ಮಾಸ್ಟರ್‌ಪೀಸ್' ಚಿತ್ರದಲ್ಲಿ ಯಶ್‌ಗೆ ಜೋಡಿಯಾಗಿ ಕುಣಿದಿದ್ದ ಈ ಚೆಲುವೆ, ಈಗ ಸುಂದರಾಂಗನ ಜೊತೆಯಾಗಿದ್ದಾಳೆ. ಅಜನೀಶ್ ಲೋಕನಾಥ್ ಸಂಗೀತ, ಮನೋಹರ ಜೋಶಿ ಛಾಯಾಗ್ರಹಣ ಚಿತ್ರಕ್ಕಿದೆ.